ದಿನಾಂಕ:25.11.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:</u>**

ದಾವ ಜಮೀನಿನ ದಕ್ಷಿಣ ದಿಕ್ಕಿಗೆ ಗೋಮಾಳ ಜಮೀನು ಇದ್ದು, ಅದು ನನ್ನ ಸ್ವಾಧೀನದಲ್ಲಿಯೇ ಇದೆ. ಆ ರೀತಿ ನನ್ನ ಸ್ವಾಧೀನದಲ್ಲಿರುವ ಗೋಮಾಳ ಜಮೀನಿನ ಸ.ನಂ.550 ಆಗಿದ್ದು, ಅದು 1½ ಎಕರೆ ಇದೆ. ಸದರಿ ಜಮೀನ ಪಹಣಿ ನನ್ನ ಹೆಸರಿನಲ್ಲಿ ಇಲ್ಲ. ದಾವ ಜಮೀನಿನ ದಕ್ಷಿಣ ದಿಕ್ಕಿಗೆ ಈಗ ಹೇಳಿರುವ ಗೋಮಾಳದ ಜಮೀನಿನ ನಂತರ ರಸ್ತೆ ಇದೆ. ಆ ರಸ್ತೆ ಕರೀಮನೆ ಎಂಬ ಪ್ರದೇಶಕ್ಕೆ ತಲುಪುತ್ತದೆ. ರಸ್ತೆಯ ನಂತರವೂ ಸಹಾ ಗೋಮಾಳ ಜಮೀನು ಇದ್ದು ಯಾರ ಸ್ವಾಧೀನದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ದಾವ ಜಮೀನಿನ ಉತ್ತರ ದಿಕ್ಕಿಗೆ ಕರೀಮನೆ ರಾಮಭಟ್ಟರವರ ಜಮೀನು ಇದ್ದು, ಅದನ್ನು ಈಗ ಮಾರಾಟ ಮಾಡಿದ್ದಾರೆ. ಆ ಜಮೀನಿನ ಖಾತೆ ಈಗ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ದಾವ ಜಮೀನಿನ ಉತ್ತರ ದಿಕ್ಕಿಗೆ ಇರುವ ಜಮೀನನ್ನು ಹೊರನಾಡು ರಾಮಜೋಯಿಸರು ಕೃಷಿ ಮಾಡುತ್ತಿದ್ದಾರೆ. ಸದರಿ ರಾಮಜೋಯಿಸರಿಂದ ಸಾಕ್ಷಿ ನುಡಿಸಲು ತೊಂದರೆ ಇಲ್ಲ. ದಾವ ಜಮೀನಿನ ಪಶ್ಚಿಮ ದಿಕ್ಕಿಗೆ ರಾಮಭಟ್ಟರ ಜಮೀನು ಇದೆ. ಅವರಿಂದ ಸಾಕ್ಷಿ ನುಡಿಸಲು ತೊಂದರೆ ಇದೆ. ರಾಮಭಟ್ಟರಿಗೆ 4 ಜನ ಮಕ್ಕಳಿದ್ದಾರೆ. ಅವರಿಂದ ಸಾಕ್ಷಿ ನುಡಿಸಲು ತೊಂದರೆ ಇಲ್ಲ. ದಾವ ಜಮೀನಿನ ಪೂರ್ವ ದಿಕ್ಕಿಗೆ ನನ್ನದೇ ಜಮೀನು ಇದೆ. ಆ ಜಮೀನು ಮೂರು ಸ.ನಂ. ನಲ್ಲಿ ಇದ್ದು ಸ.ನಂ.490, ಸ.ನಂ.500, ಮತ್ತೊಂದು ಸ.ನಂ. ನೆನಪಾಗುತ್ತಿಲ್ಲ. ಆ ಜಮೀನಿನ ಸ್ವಾಧೀನದಲ್ಲಿ ಪ್ರತಿವಾದಿ ಇದ್ದಾರೆ ಎಂದರೆ ಸರಿ.

ದಾವ ಜಮೀನಿನ ಕೃಷಿ ಚಟುವಟಕೆ ಬಗ್ಗೆ ನನ್ನ ಬಳಿ ಲೆಕ್ಕ ಇದೆ. ಆ ರೀತಿ ಲೆಕ್ಕವನ್ನು ಡೈರಿಯಲ್ಲಿ ಬರೆದಿಟ್ಟಿರುತ್ತೇನೆ. ಈ ರೀತಿ 20 ವರ್ಷಗಳಿಂದ ಡೈರಿ ಬರೆಯುತ್ತಿದ್ದೇನೆ. ಆ ಡೈರಿಗಳನ್ನು ತಂದು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಎಲ್ಲಾ ಡೈರಿಗಳು ಇಲ್ಲ ಆದರೆ ಇತ್ತೀಚಿನ ಡೈರಿಗಳು ಇವೆ ಎಂದು ನುಡಿಯುತ್ತಾರೆ. ಈಗ ನನ್ನ ಬಳಿ ಕಳೆದ 3 ವರ್ಷಗಳ ಡೈರಿಗಳು ಇವೆ. ನಾನು ದಾವ ಜಮೀನಿನ ಕೃಷಿ ಮಾಡುತ್ತಿಲ್ಲ ಹಾಗೂ ನನ್ನ ಬಳಿ ಯಾವುದೇ ಡೈರಿ ಇಲ್ಲ ಎಂದರೆ ಸರಿಯಲ್ಲ. ದಾವ ಜಮೀನಿನ ನಕ್ಷೆ ನೋಡಿದ್ದೇನೆ. ದಾವ ಜಮೀನಿಗೆ ನಾನೇ 6 ಬಾಂದುಕಲ್ಲನ್ನು ಹಾಕಿರುತ್ತೇನೆ. ದಾವ ಜಮೀನನ್ನು ಕರೀಮನೆ ಗ್ರಾಮದವರಿಂದ ಕೃಷಿ ಮಾಡಿಸುತ್ತಿದ್ದೆ ಆದರೆ ಈಗ ನನ್ನ ಮಗ ಮಾಡಿಸುತ್ತಿದ್ದಾರೆ. 2018 ನೇ ಇಸವಿಯಿಂದ ದಾವ ಜಮೀನನ್ನು ನನ್ನ ಮಗ ಕೃಷಿ ಮಾಡಿಸುತ್ತಿದ್ದಾನೆ. ನನ್ನ ಮಗ ಕುದುರೆಮುಖ ಹಾಗೂ ಮಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ನನ್ನ ವಿದ್ಯಾಭ್ಯಾಸ ಮುಗಿಸಿ 8 ವರ್ಷಗಳಾಗಿವೆ. ಅವರು ಈಗ ಬೇರೆ ಯಾವ ಕೆಲಸ ಮಾಡುತ್ತಿಲ್ಲ ಆದರೆ ಮೊದಲು TCS ನಲ್ಲಿ ಕೆಲಸ ಮಾಡುತ್ತಿದ್ದರು. TCS ನಲ್ಲಿ ಕೆಲಸ ಬಿಟ್ಟು ಮೂರು ವರ್ಷಗಳಾಗಿವೆ. ನಿಮ್ಮ ಮಗನನ್ನು ಸಾಕ್ಷಿ ಮಾಡಿಸುತ್ತೀರ ಎಂದರೆ ಸಾಕ್ಷಿಯು ಅವರನ್ನು ಕೇಳಿ ಹೇಳುತ್ತೇನೆ ಎಂದು ನುಡಿಯುತ್ತಾರೆ.

ದಾವ ಜಮೀನನ್ನು ಕೃಷಿ ಕೆಲಸ ಮಾಡುತ್ತಿದ್ದ ಕರೀಮನೆ ಗ್ರಾಮದ ಕೆಲಸಗಾರರ ಹೆಸರು ಈಗ ಹೇಳಲು ಆಗುವುದಿಲ್ಲ. ನಾನು ದಾವ ಜಮೀನನ್ನು ಕೃಷಿ ಮಾಡಿಸಿರದ ಕಾರಣ ಕೆಲಸಗಾರರ ಹೆಸರು ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ. ದಾವ ಜಮೀನಿನಲ್ಲಿ ಕಾಫೀ, ಮೆಣಸು ಮತ್ತು ಏಲಕ್ಕಿ ಇದೆ. ಸದರಿ ಜಮೀನಿನಲ್ಲಿ 25-30 ಮೂಟೆ ಕಾಫೀ ಬೆಳೆ, 4-5 ಕ್ವಿಂಟಲ್ ಮೆಣಸು, 4-5 ಕ್ವಿಂಟಲ್ ಅಡಿಕೆ ಮತ್ತು 2-3 ಕೆ.ಜಿ. ಏಲಕ್ಕಿ ಬರುತ್ತದೆ. ಸದರಿ ಬೆಳೆಗಳನ್ನು ಹಸಿ ಇರುವಾಗಲೇ ಕಾಂಟ್ರಾಕ್ಟ್ ಮೂಲಕ ಮಾರುತ್ತೇವೆ. ಈ ರೀತಿ ಬೇರೆ ಬೇರೆಯವರಿಗೆ ಮಾರಾಟ ಮಾಡುತ್ತೇವೆ. ಈ ದಾವೆಯನ್ನು ಸಲ್ಲಿಸಿದ ನಂತರ ಯಾರು ಯಾರಿಗೆ ಫಸಲು ಮಾರಾಟ ಮಾಡಿರುತ್ತೇನೆ ಹಾಗೂ ವ್ಯಾಪಾರಸ್ಥರ ಊರು ಯಾವುದು ಎಂದು ಹೇಳಲು ಆಗುವುದಿಲ್ಲ. ಫಸಲು ಮಾರಾಟ ಸಂಬಂಧದ ಬಿಲ್ ನನ್ನ ಬಳಿ ಇರಬಹುದು. ದಾವ ಜಮೀನಿನಿಂದ ಯಾವ ಯಾವ ವರ್ಷ ಎಷ್ಟು ಫಸಲು ಬಂದಿದೆ ಎಂದು ಈಗ ಹೇಳಲು ಆಗುವುದಿಲ್ಲ. ನಾನು ದಾವ ಜಮೀನಿನ ಸ್ವಾಧೀನದಲ್ಲಿ ಇಲ್ಲ ಹಾಗೂ ಬೆಳೆ ಬೆಳೆಯುತ್ತಿಲ್ಲದ ಕಾರಣ ಬೆಳೆಯನ್ನು ಯಾರಿಗೆ ಮಾರಾಟ ಮಾಡಲಾಗಿದೆ ಎಂದು ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ. ವಾರ್ಷಿಕವಾಗಿ 2-3 ಬಾರಿ ಬೆಳೆ ಮಾರಾಟ ಮಾಡುತ್ತೇನೆ. ಬೆಳೆ ಕೊಯ್ಯಲನ್ನು ಕಾಂಟ್ರಾಕ್ಟ್ ನವರಿಗೆ ಬಿಟ್ಟಿರುತ್ತೇವೆ.

ನಾನು ದಾವ ಜಮೀನಿನ ಸ್ವಾಧೀನದಲ್ಲಿ ಇಲ್ಲದ ಕಾರಣ ಯಾವುದೇ ವಿವರವನ್ನು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ದಾವ ಜಮೀನಿಗೆ ಕೆರೆಯಿಂದ ನೀರಿನ ವ್ಯವಸ್ಥೆ ಇದೆ. ಆ ಕೆರೆ ಸ.ನಂ.503 ರಲ್ಲಿ ಇದೆ. ಸದರಿ ಕೆರೆ ಸ.ನಂ.503 ರ ಮಧ್ಯಭಾಗದಲ್ಲಿ ಇದೆ. ದಾವ ಜಮೀನಿನ ಕೆಳಗೆ ಇಳಿಜಾರಿನ ಹಾಗಿದೆ. ಅದು ದಕ್ಷಿಣದಲ್ಲಿ ಎತ್ತರ ಇದ್ದು ಉತ್ತರಕ್ಕೆ ತಗ್ಗಿದೆ. ಪ್ರತಿವಾದಿ ಕೃಷಿ ಮಾಡುತ್ತಿರುವ ಜಮೀನಿಗೆ ಸ್ಪ್ರಿಂಕ್ಲರ್ ಅಳವಡಿಸಿದ್ದಾರೆ ಎಂದರೆ ಸರಿ. ನಮ್ಮ ಕುಟುಂಬದ ಜಮೀನುಗಳು ಹಾಗೂ ದಾವಾ ಸ್ವತ್ತಿನ ನಡುವೆ ಬೇಲಿ ಇದೆ. ಈ ರೀತಿ ದಕ್ಷಿಣದಿಂದ ಉತ್ತರಕ್ಕೆ ಹಾಗೂ ಪೂರ್ವದಿಂದ ಪಶ್ಚಿಮಕ್ಕೆ ಒಂದು ಬೇಲಿ ಇದೆ. ಆ ಬೇಲಿಗಳು ರಸ್ತೆ ಮತ್ತು ಕರೀಮನೆ ರಾಮಭಟ್ಟರವರ ಜಮೀನಿನ ಪಕ್ಕದಲ್ಲಿ ಇದೆ ಎಂದರೆ ಸರಿ. ನನ್ನ ತಂದೆಯ ಹೆಸರಿಗೆ ಇರುವ ಜಮೀನುಗಳಲ್ಲಿ ಅಡಿಕೆ ಮತ್ತು ಕಾಫೀ ಬೆಳೆ ಇದೆ. ಸದರಿ ಜಮೀನುಗಳು ಹಾಗೂ ದಾವ ಜಮೀನಿನ ನಡುವೆ ಅರ್ಧದಷ್ಟು ಬೇಲಿ ಇದೆ. ಆ ರೀತಿ ಯಾವುದೇ ಬೇಲಿ ಇಲ್ಲ ಎಂದರೆ ಸಾಕ್ಷಿಯು ಬೇಲಿ ಹಾಕಿದಾಗಲೆಲ್ಲಾ ಪ್ರತಿವಾದಿ ಅದನ್ನು ಕಿತ್ತುಹಾಕುತ್ತಾರೆ ಎಂದು ನುಡಿಯುತ್ತಾರೆ. ದಾವ ಸ್ವತ್ತು ಮತ್ತು ನನ್ನ ತಂದೆ ಹೆಸರಿಗೆ ಇರುವ ಖಾತೆಗಳು ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ.

ದಾವ ಜಮೀನಿನಲ್ಲಿ ಎಷ್ಟು ಅಡಿಕೆ ಮರಗಳು ಹಾಗೂ ಕಾಫೀ ಗಿಡಗಳು ಇವೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ದಾವ ಜಮೀನಿನಲ್ಲಿ ತೆಂಗಿನ ಮರಗಳು ಇಲ್ಲ. ಆ ಜಮೀನಿನಲ್ಲಿ ಸುಮಾರು 100-200 ಮೆಣಸಿನ ಬಳ್ಳಿಗಳು ಇವೆ. ದಾವ ಜಮೀನಿನಲ್ಲಿ ಇರುವ ಅಡಿಕೆ ಮರಗಳ ನಡುವೆ ಸುಮಾರು 6-8 ಅಡಿ ದೂರ ಇರಬಹುದು. ಅದೇರೀತಿ ಕಾಫೀ ಗಿಡಗಳ ನಡುವೆ 5-8 ಅಡಿ ಅಂತರ ಇದೆ. ನಾನು ಆದಾಯ ತೆರಿಗೆ

ಪಾವತಿದಾರ ಎಂದರೆ ಸರಿ. ದಾವ ಜಮೀನಿನಲ್ಲಿ ಬಂದ ಉತ್ಪತ್ತಿಯನ್ನು ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ತೋರಿಸಿಲ್ಲ. 2019 ರಲ್ಲಿ ನಾನು ಕೆಲಸದಿಂದ ನಿವೃತ್ತಿ ಹೊಂದಿದೆ. ನಾನು ಕೆಲಸ ಮಾಡುತ್ತಿದ್ದ ಸಂಸ್ಥೆ ಪಬ್ಲಿಕ್ ಸೆಂಟರ್ ಕಚೇರಿ ಎಂದರೆ ಸರಿ. ದಾವ ಜಮೀನನ್ನು ಪಡೆಯುವಾಗ ಕಂಪೆನಿಯವರಿಂದ ಅನುಮತಿ ಪಡೆಯಲಿಲ್ಲ. ನಾವು ಕಂಪೆನಿಗೆ ಅಸೆಟ್ಸ್ ಮತ್ತು ಲಯಾಬಿಲಿಟೀಸ್ ಮಾಹಿತಿ ಕೊಡುತ್ತಿರಲಿಲ್ಲ. ಕಾಫೀ ಗಿಡಗಳು ನನ್ನ ಹೆಸರಿಗೆ CRC ಆಗಿಲ್ಲ. ಅತೀವೃಷ್ಟಿ ಮತ್ತು ಅನಾವೃಷ್ಟಿ ಆದಾಗ ದಾವ ಜಮೀನಿನ ಸಂಬಂಧ ನನಗೆ ಪರಿಹಾರ ಬಂದಿರುವ ಬಗ್ಗೆ ದಾಖಲೆ ಇದೆ. ಆ ದಾಖಲೆಯನ್ನು ಹಾಜರುಪಡಿಸಿಲ್ಲ. ದಾವ ಜಮೀನಿನ ಮೇಲೆ ಸಹಕಾರ ಸಂಘದಲ್ಲಿ ಸಾಲ ಪಡೆದಿದ್ದೆ. ಈ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ದಾವ ಜಮೀನಿನಲ್ಲಿ ಕಾಫೀ ಮತ್ತು ಮೆಣಸು ಬೆಳೆಗಳಿಗೆ ಕೃಷಿ ಇಲಾಖೆಯಿಂದ ಸಹಾಯ ಧನ ಪಡೆದಿಲ್ಲ. ಸಣ್ಣ ಹಿಡುವಳಿ ದಾರರಿಗೆ ಸರ್ಕಾರದಿಂದ ಸಹಾಯ ಧನ ಬರುತ್ತದೆ ಎಂದರೆ ಸರಿ.

ದಾವ ಜಮೀನಿನಲ್ಲಿ ಕೆಲಸ ಮಾಡುವವರಿಂದ ಸಾಕ್ಷಿ ನುಡಿಸಲು ನನಗೆ ತೊಂದರೆ ಇಲ್ಲ. ನನ್ನ ದಾವ ಜಮೀನಿನ ಆದಾಯ ಬಗ್ಗೆ ಆದಾಯ ತೆರಿಗೆ ಪಾವತಿಸುವಾಗ ತೋರಿಸಿಲ್ಲ ಎಂದರೆ ಸರಿಯಲ್ಲ. ದಾವ ಜಮೀನು ನನ್ನ ಸ್ವಾಧೀನದಲ್ಲಿ ಇಲ್ಲದ ಕಾರಣ ಯಾವುದೇ ಸಬ್ಸೀಡಿ ಪಡೆದಿಲ್ಲ ಎಂದರೆ ಸರಿಯಲ್ಲ. ದಾವ ಜಮೀನು ನನ್ನ ಅಜ್ಜ ಪದ್ಮನಾಭ ಭಟ್ ರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿರವರಿಗೆ ಮೂಲಗೇಣಿ ಹಕ್ಕಿನ ಪ್ರಕಾರ ದಾವ ಜಮೀನು ಬಂದಿತ್ತು ಎಂದರೆ ಸರಿಯಲ್ಲ. ಸದರಿ ಜಮೀನು ವಾರಸು ಪ್ರಕಾರ ನನ್ನ ತಂದೆಗೆ ಬಂತು ಎಂದರೆ ಸರಿಯಲ್ಲ. ಆ ಜಮೀನನ್ನು ಖಾತೆ ಮಾಡಿಸಿಕೊಳ್ಳಲು ಮಾತ್ರ ರಾಮಭಟ್ ರವರಿಂದ ನನ್ನ ತಂದೆ ಕ್ರಯಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಕ್ರಯಪತ್ರ ಬರೆದುಕೊಂಡ ಪೂರ್ವದಿಂದಲೂ ಸಹಾ ದಾವ ಜಮೀನು ನನ್ನ ತಂದೆ ಮತ್ತು ಅಜ್ಜನ ಬಳಿ ಇತ್ತು ಎಂದರೆ ಸರಿಯಲ್ಲ. ಈ ಕಾರಣ ದಾವ ಜಮೀನಿನ ಸಂಬಂಧ ದಾನಪತ್ರ ಬರೆದುಕೊಡಲು ನನ್ನ ತಂದೆಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಈ ವಿಚಾರ ಈಗಾಗಲೇ ತೀರ್ಮಾನವಾಗಿದೆ ಎಂದು ನುಡಿಯುತ್ತಾರೆ. ದಾನಪತ್ರದ ಪ್ರಕಾರ ದಾವ ಜಮೀನಿನ ಸ್ವಾಧೀನ ನನಗೆ ನೀಡಲಾಗಿಲ್ಲ ಎಂದರೆ ಸರಿಯಲ್ಲ. ದಾನಪತ್ರ ಬರೆದ ದಿನಾಂಕದಂದು ನಾನು ನೌಕರಿಯಲ್ಲಿ ಇದ್ದೆ ಎಂದರೆ ಸರಿ.

ನನ್ನ ತಂದೆಯ ಮರಣ ದಿನಾಂಕ ಮರೆತುಹೋಗಿದೆ. ದಾವ ಜಮೀನಿನ ಸಂಬಂಧದ ನನ್ನ ಹೆಸರಿಗೆ ಇರುವ ದಾನಪತ್ರವನ್ನು ಪ್ರಶ್ನಿಸಿ ಪ್ರತಿವಾದಿ ಅ.ದಾ.ಸಂ.149/1999 ರಂತೆ ದಾವೆ ಸಲ್ಲಿಸಿದ್ದು ಆ ದಾವೆಯಲ್ಲಿ ನನ್ನ ತಂದೆ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ದಾವ ಜಮೀನು ಒಟ್ಟು ಕುಟುಂಬದ ಜಮೀನು ಎಂದು ಬರೆಸಿದ್ದಾರೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ದಾವಾ ಜಮೀನು ಹಾಗೂ ಮೂಲಗೇಣಿಯಿಂದ ಬಂದ ಜಮೀನು ಬೇರೆ ಬೇರೆ ಎಂದು ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ಸದರಿ ತೀರ್ಪಿನ ವಿರುದ್ದ ಪ್ರತಿವಾದಿ ಆರ್.ಎ.173/2001 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಆದ ತೀರ್ಪಿನ ವಿರುದ್ದವೂ

ಸಹಾ ಪ್ರತಿವಾದಿ ಆರ್.ಎಸ್.ಎ.1734/2009 ರಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ಪ್ರತಿವಾದಿ ನನ್ನ ಹಾಗೂ ನನ್ನ ತಂದೆಯ ವಿರುದ್ದ ಅ.ದಾ.ಸಂ.34/2004 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಒಟ್ಟು 12 ಸ್ವತ್ತುಗಳ ವಿಭಾಗ ಕೇಳಿದ್ದರು ಎಂದರೆ ಸರಿ. ಆ ದಾವೆಯ 12 ನೇ ಅನುಸೂಚಿಯ ಸ್ವತ್ತು ಪ್ರಸ್ತುತ ದಾವೆಯ ಅನುಸೂಚಿ ಸ್ವತ್ತು ಎಂದರೆ ಸರಿ. ಆ ದಾವೆಯಲ್ಲಿ ನನ್ನ ತಂದೆಯ ವಿಚಾರಣೆಯಾಗಿದೆ. ಸದರಿ 12 ಸ್ವತ್ತುಗಳ ಪೈಕಿ ಕೆಲವು ಪಿತ್ರಾರ್ಜಿತ ಹಾಗೂ ಕೆಲವು ಆಸ್ತಿಗಳು ಕ್ರಯಕ್ಕೆ ಪಡೆದ ಆಸ್ತಿಗಳು ಎಂದು ತೋರಿಸಲಾಗಿತ್ತು ಎಂದರೆ ಸರಿ. ಆ ದಾವೆಯಲ್ಲಿ ವಾರಸುದಾರಿಕೆಯಿಂದ ಬಂದ ಸ್ವತ್ತುಗಳಲ್ಲಿ ಮಾತ್ರ ಪಾಲು ಕೊಡುವುದಾಗಿ ನನ್ನ ತಂದೆ ಹೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನ್ನ ತಂದೆ ಏನು ಪ್ರತಿಪಾಧನೆ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ 12 ಸ್ವತ್ತುಗಳ ಪೈಕಿ 11 ಸ್ವತ್ತುಗಳು ಕುಟುಂಬದ ಸ್ವತ್ತುಗಳು ಎಂದು ತೀರ್ಮಾನವಾಗಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆಯ ಬಳಿ ಇದ್ದ ಎಲ್ಲಾ ಸ್ವತ್ತುಗಳು ಕುಟುಂಬದ ಸ್ವತ್ತುಗಳ ಆದಾಯದಿಂದ ಖರೀದಿಸಿದ ಸ್ವತ್ತುಗಳು ಎಂದು ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಯಾವುದೇ ವೈಯಕ್ತಿಕ ಆಸ್ತಿಗಳು ಇಲ್ಲ ಎಂದು ಈಗಾಗಲೇ ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ಈ ಕಾರಣ ದಾವ ಜಮೀನು ಸಹಾ ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ.

ಅ.ದಾ.ಸಂ.34/2004 ರಲ್ಲಿ ಪ್ರಸ್ತುತ ದಾವ ಜಮೀನನ್ನು ಹೊರತುಪಡಿಸಿ ಬೇರೆಲ್ಲಾ ಜಮೀನುಗಳ ವಿಭಾಗಕ್ಕೆ ಆದೇಶವಾಗಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ಆರ್.ಎಸ್.ಎ.1734/2009 ರ ಆದೇಶದನ್ವಯ ದಾವ ಜಮೀನಿನ ವಿಭಾಗವನ್ನು ಕಾಯ್ದಿರಿಸಲಾಗಿದೆ ಎಂದರೆ ಸರಿ. ಈ ಕಾರಣಕ್ಕಾಗಿ ದಾವ ಜಮೀನಿನ ಸಂಬಂಧ ಪ್ರತ್ಯೇಕ ದಾವೆ ಸಲ್ಲಿಸು ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಮೇಲ್ಮನವಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇದೆ. ದಾವಾ ಜಮೀನಿನ ನನ್ನ ಹಕ್ಕು ಇಂದಿಗೂ ತೀರ್ಮಾನವಾಗದ ಕಾರಣ ಈ ದಾವೆಯಲ್ಲಿ ಘೋಷಣಾತ್ಮಕ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ದಾವ ಜಮೀನು ನನ್ನ ತಂದೆಯ ವಾರಸುದಾರರೆಲ್ಲರಿಗೂ ಸೇರಿದ ಜಮೀನು ಎಂದರೆ ಸರಿಯಲ್ಲ. ಈ ಕಾರಣ ಪ್ರತಿವಾದಿಯ ವಿರುದ್ದ ಪ್ರತಿಬಂಧಕಾಜ್ಞೆ ಪಡೆಯಲು ನಾನು ಅರ್ಹನಾಗಿಲ್ಲ ಎಂದರೆ ಸರಿಯಲ್ಲ. ಅನುಚಿತ ಪ್ರಭಾವದಿಂದ ಬರೆಸಿಕೊಂಡಿರುವ ದಾನಪತ್ರದ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಖಾತೆ ಮತ್ತು ಪಹಣಿಯನ್ನು ದುರುಪಯೋಗಪಡಿಸಿಕೊಂಡು ದಾವ ಜಮೀನಿನಲ್ಲಿ ನಾನೊಬ್ಬನೇ ಸ್ವಾಧೀನದಲ್ಲಿ ಇದ್ದೇನೆ ಎಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ನೈಜ ಸಂಗತಿಗಳನ್ನು ತೋರಿಸುವುದಿಲ್ಲ ಎಂದರೆ ಸರಿಯಲ್ಲ.

ದಾವ ಜಮೀನು 2018-19 ನೇ ಸಾಲಿನ ಪಹಣಿ ಹಾಜರುಪಡಿಸಲು ತೊಂದರೆ ಇಲ್ಲ. ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಿಪಿ-10 ಮತ್ತು 11 ರ ನಕ್ಷೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ

ಸರಿಯಲ್ಲ. ಸದರಿ ನಕ್ಷೆಗಳು ಯಾವ ವರ್ಷ ತಯಾರುಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ನಕ್ಷೆ ತಯಾರಿಸುವಾಗ ಬಾಜುದಾರರಿಗೆ ನೋಟೀಸು ಕೊಡಲಾಗಿತ್ತು, ಆದರೆ ನನಗೆ ನೋಟೀಸು ಬಂದಿರಲಿಲ್ಲ. ಬಾಜುದಾರರಿಗೆ ನೋಟೀಸು ಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಬಾಜುದಾರರಿಗೆ ನೋಟೀಸು ಕೊಡಲಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಗೆ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇರುವುದಿಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.